
# ನಾಂದಿಪದ



ಪತ್ತೇದಾರ ಪುರುಷೋತ್ತಮ– ಇದು ಎನ್. ನರಸಿಂಹಯ್ಯ ತಮ್ಮ ಪತ್ತೇದಾರಿ ಕಾದಂಬರಿಗಳಲ್ಲಿ ಸೃಷ್ಟಿಸಿದ ಪಾತ್ರ. ಅವನು ಪತ್ತೆ ಮಾಡದ ಪ್ರಕರಣಗಳಿಲ್ಲ. ಓದುಗರನ್ನು ಆರಾಮಕುರ್ಚಿಗೆ ಕಟ್ಟಿಹಾಕುತ್ತಿದ್ದ ಪತ್ತೇದಾರಿ ಕಾದಂಬರಿಗಳು ಈಗ ಹೆಚ್ಚೂಕಡಿಮೆ ಕಣ್ಮರೆಯಾಗಿವೆ. ಸುಮಾರು 70–80 ವರ್ಷಗಳ ಈಚೆಗೆ ಬಂದ ಪತ್ತೇದಾರಿ ಕಾದಂಬರಿಗಳು ಕನ್ನಡ ವಾಚಕರನ್ನು ಕೆಲಕಾಲ ಮುದಗೊಳಿಸಿದವು. ಭಿ.ಪ. ಕಾಳೆ, ಮ. ರಾಮಮೂರ್ತಿ, ಟಿ.ಕೆ. ರಾಮರಾವ್, ಸುದರ್ಶನ ದೇಸಾಯಿ, ಸಾಸ್ಕಾಮೂರ್ತಿ, ಮಾ.ಭಿ.ಶೇ ಹೀಗೆ ಸಾಲುಸಾಲು ಲೇಖಕರು ಪತ್ತೇದಾರಿ ಕತೆ, ಕಾದಂಬರಿಗಳನ್ನು ಬರೆಯುತ್ತಿದ್ದರು. ಕನ್ನಡದ ಮಹತ್ವದ ಲೇಖಕರಾದ ಸಂಸ, ಶಿವರಾಮ ಕಾರಂತ, ಕೆರೂರು ವಾಸುದೇವಾಚಾರ್ಯ, ಶಂಕರ ಮೊಕಾಶಿ ಪುಣೇಕರ ಸಹ ಈ ಪ್ರಕಾರದ ಕತೆ, ಕಾದಂಬರಿಗಳನ್ನು ಬರೆದಿದ್ದಾರೆ. ಅವು ಹೆಚ್ಚು ಜನಪ್ರಿಯವಾಗಿದ್ದು ಪತ್ರಿಕೆಗಳಲ್ಲಿ ಪ್ರಕಟವಾಗಲು ಶುರುವಾದ ಮೇಲೆಯೇ. ಈ ಸಾಹಿತ್ಯದ ಲೇಖಕರೆಲ್ಲ ಓದುಗರ, ಪ್ರಕಾಶಕರ ಪಾಲಿನ ಡಾರ್ಲಿಂಗ್‌ಗಳಾದ ಕಾಲವೂ ಒಂದಿತ್ತು. ಅಂಥ ಕಾಲವೊಂದು ಇತ್ತೆ ಎಂಬುದನ್ನು ಈಗಿನ ವಾಚಕರು ಪತ್ತೆ ಮಾಡಬೇಕಾಗಿದೆ!

ಕನ್ನಡ ಪತ್ತೇದಾರಿ ಬರಹಗಳಿಗೆ ಸ್ಫೂರ್ತಿ ಆರ್ಥರ್ ಕಾನನ್ ಡಾಯ್ಲ್, ಜೇಮ್ಸ್ ಹ್ಯಾಡ್ಲಿ ಚೇಸ್ ಮುಂತಾದ ಇಂಗ್ಲಿಷ್ ಲೇಖಕರು. ಅವರ ಪ್ರಭಾವದಿಂದ ಆ ಬಗೆಯ ಬರಹಗಳು ಕನ್ನಡದಲ್ಲಿ ಬಂದವಾದರೂ ಆ ಮಟ್ಟವನ್ನು ಮುಟ್ಟಲು ಅವಕ್ಕೆ ಆಗಲೇ ಇಲ್ಲ. ಶೆರ್ಲಾಕ್ ಹೋಮ್ಸ್ ಪಾತ್ರದ ಸೃಷ್ಟಿಕರ್ತ ಆರ್ಥರ್ ಕಾನನ್ ಡಾಯ್ಲ್‌ನ ಕತೆ, ಕಾದಂಬರಿಗಳು ಈಗಲೂ ಇಂಗ್ಲಿಷ್‌ನಲ್ಲಿ ಕ್ಲಾಸಿಕ್ ಆಗಿವೆ. ಅಂದರೆ, ಈಗಲೂ ಅವನ್ನು ಓದುವವರಿದ್ದಾರೆ. ಅವನ ಕತೆಗಳು ಅನೇಕ ದೇಶ, ಭಾಷೆಯ ಬರಹಗಾರರನ್ನು ಪ್ರಭಾವಿಸಿವೆ. ಕನ್ನಡದಲ್ಲಿ ಇತ್ತೀಚೆಗಂತೂ ಪತ್ತೇದಾರಿ ಬರಹಗಳು ಬರುತ್ತಲೂ ಇಲ್ಲ, ಹಿಂದಿನವುಗಳ ಮರುಮುದ್ರಣವೂ ಆಗುತ್ತಿಲ್ಲ. ಮತ್ತೆ ಅವು ಅಚ್ಚಾಗದಿರಲು ಕಾರಣವಿದೆ. ಇಂದಿನ ಕನ್ನಡದ ನುಡಿಗಟ್ಟು, ಬರವಣಿಗೆಯ ಶೈಲಿ ತುಂಬಾ ಬದಲಾಗಿದೆ. ಇಂದು ಅವನ್ನು ಓದಿದರೆ ಖುಷಿ ಕೊಡುತ್ತವೆ ಎನ್ನಲಾಗದು.

ಪತ್ತೇದಾರಿ ಕತೆಗಳ ಬರವಣಿಗೆ ಸಹ ಸುಲಭವಲ್ಲ. ಅದರ ಕಟ್ಟಡ ಅತ್ಯಂತ ನಿಖರವಾಗಿ ಇರಬೇಕಾಗುತ್ತದೆ. ಅಪರಾಧಶಾಸ್ತ್ರ, ಕಾನೂನು, ವೈದ್ಯವಿಜ್ಞಾನ, ತಂತ್ರಜ್ಞಾನ ಹೀಗೆ ಹಲವು ಜ್ಞಾನಶಿಸ್ತುಗಳ ಪರಿಚಯ ಅದಕ್ಕೆ ಬೇಕು. ಹೇಳುತ್ತಿರುವುದು ಎಂದಿನ ಕಳ್ಳ–ಪೊಲೀಸ್ ಕತೆಯೇ ಆದರೂ ಯಾರಿಗೂ ಗೊತ್ತಿಲ್ಲದ ಹೊಸ ಪ್ರಸಂಗ ಎಂಬ ವಿಶ್ವಾಸದಲ್ಲಿ, ನಂಬುವಂತೆ, ಕುತೂಹಲ ಬಿಟ್ಟುಹೋಗದಂತೆ ನಿರೂಪಿಸಬೇಕಾಗುತ್ತದೆ. ಕೊಂಚವೇ ಜಾರಿದರೂ ಬರವಣಿಗೆ ಮೇಲೆ ಏಳಲಾಗದಂತೆ ಪ್ರಪಾತಕ್ಕೆ ಬಿದ್ದಿರುತ್ತದೆ. ಈ ಕತೆಗಾರರ ಸವಾಲು, ಜಾಣ್ಮೆ ಇರುವುದು ಇಲ್ಲಿಯೇ. ಕನ್ನಡ ಲೇಖಕಿಯರು ಯಾಕೋ ಈ ಸಾಹಿತ್ಯ ಸೃಷ್ಟಿಯಿಂದ ದೂರವೇ ಉಳಿದಿದ್ದಾರೆ.

ಮನುಷ್ಯ ಮೂಲಭೂತವಾಗಿ ಕ್ರೂರಿ. ಹಿಂಸೆ ಅವನ ಮೂಲ ಪ್ರವೃತ್ತಿ. ಅವನನ್ನು ಅಪರಾಧಿಯನ್ನಾಗಿ ಮಾಡುವುದು ನಾವು ಒಪ್ಪಿಕೊಂಡ ನಾಗರಿಕ ಸಮಾಜವೇ ಅಲ್ಲವೆ? ತಾನೇ ಹೆಣೆದ ಕಾನೂನಿನ ನಿಯಮಗಳ ಬಲೆಯಲ್ಲಿ ಸಿಲುಕಿ ಒದ್ದಾಡುವುದು ಮನುಷ್ಯರ ಎಂದಿನ ಪಾಡಲ್ಲವೆ? ಸಂಪತ್ತನ್ನು ಕೂಡಿಟ್ಟು ಅದರತ್ತ ದೀಪದ ಹುಳಗಳನ್ನು ಆಕರ್ಷಿಸಿದ್ದು ಯಾರು? ಇಂತಹ ಸಾಹಿತ್ಯದ ಅಸಲು ಪ್ರಶ್ನೆಗಳನ್ನು ಪತ್ತೇದಾರಿ ಸಾಹಿತ್ಯ ಕೇಳಿಕೊಳ್ಳುವುದಿಲ್ಲ. ಅದು ಅದರ ಕೆಲಸವೂ ಅಲ್ಲ. ರಂಜಿಸುವುದಷ್ಟೆ ಅದರ ಕಾಯಕ. ತಲೆಗೆ ಹೆಚ್ಚು ಕೆಲಸ ಕೊಡದ ಇಂತಹ ರೋಮಾಂಚಕ ಕತೆಗಳು ಎಲ್ಲಿ ಹೋದವು ಎಂಬುದನ್ನು ಇವತ್ತು ಕೇಳಿಕೊಳ್ಳಬೇಕಾಗಿದೆ. ಪತ್ತೆ ಮಾಡುವ ಮನುಷ್ಯ ಸಹಜ ಸ್ವಭಾವವನ್ನು ಬಿಂಬಿಸುವ ಇಂತಹ ಕತೆಗಳಿಗೆ ಓದುಗರು ಎಲ್ಲ ಸಮಯದಲ್ಲೂ ಇರುತ್ತಾರೆ. ಅದರ ಬರಹಗಾರರು ಎಲ್ಲಿದ್ದಾರೆ ಎಂಬುದನ್ನು ಹುಡುಕಲು ಮಾತ್ರ ಪತ್ತೇದಾರರ ನೆರವು ಪಡೆಯಬೇಕಿದೆ!

'ಮಯೂರ' ಈಗಿನ ಕಾಲದ ಪತ್ತೇದಾರಿ ಕತೆಗಳನ್ನು ಸ್ವಾಗತಿಸುತ್ತದೆ.

**ಸಂದೀಪ ನಾಯಕ**